# ಬಯಕೆ

■ ಸಿದ್ದನಗೌಡ ಬಿಜ್ಜೂರ, ಸರೂರ
ಕಲೆ: ಸಂತೋಷ್ ಸಸಿಹಿತ್ಲು

ವಾರದ ಎಲ್ಲ ಏಳೂ ದಿನಗಳು
ರವೀವಾರವೇ ಆಗಿರಲಿ
ಶಾಲೆಯ ಅಷ್ಟೂ ಅವಧಿಗಳೆಲ್ಲ
ಆಟಕೆ ಮೀಸಲು ಆಗಿರಲಿ

ಊಟದ ಡಬ್ಬಿಯ ತುಂಬ ಬಗೆ ಬಗೆ
ಬಣ್ಣದ ಚಾಕೊಲೇಟ್ ತುಂಬಿರಲಿ
ಹೋಂ ವರ್ಕ್ ಅನ್ನುವುದೇನರೆ ಇದ್ರೆ
ಹರಟೇ ಮಾತುಗಳಾಗಿರಲಿ

ಅಮ್ಮನು ದಿನವೂ ಕಂದಾ ಎಂದು
ಪ್ರೀತಿಯ ಮಳೆಯಲಿ ತೋಯಿಸಲಿ!
ಅಪ್ಪನ ಸಿಟ್ಟು ಅಮ್ಮನ ಸೆರಗಲಿ
ಬೆಚ್ಚಗೆ ಮಲಗಿ ನಿದ್ರಿಸಲಿ!

ಬೀಗರು ಬಂದರೆ ಚೀಲದ ತುಂಬ
ತಿಂಡಿ ತಿನಿಸನೇ ತಂದಿರಲಿ!
ಅಪ್ಪನು ಬಂದರೆ ಹೊರಗಡೆಯಿಂದ
ಕುಲು ಕುಲು ನಗುತಾ ಬರುತಿರಲಿ!

ಶಾಲೆಗೆ ಹೋಗೊ ಸಮಯಕೆ ದಿನವೂ
ಏನಾರ ಒಂದು ನೆವ ಸಿಗಲಿ!
ಟ್ಯೂಶನ್ ಹೇಳೊ ಟಾಕಪ್ ಮೇಷ್ಟ್ರಿಗೆ
ದಿನವೂ ದೂರದ ಟೂರ್ ಬರಲಿ!

ಪರೀಕ್ಷೆ ಅನ್ನೋ ಪಾಪದ ಕಾಲ
ನಮ್ಮಿಂದ ಬಹಳ ದೂರಿರಲಿ!
ಬಯಸಿದ್ದೆಲ್ಲವ ಆಗು ಮಾಡುವ
ದೇವರು ನಮ್ಮವನಾಗಿರಲಿ!



## ಕುಂಚ ಪ್ರಪಂಚ

ಇದು ಮಕ್ಕಳ ಭಾವ ವಿಕಾಸಕ್ಕೆ ವೇದಿಕೆ. ಎಳೆಯರು ಬಿಡಿಸಿದ ವರ್ಣಚಿತ್ರ–ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:** editorsu@sudha.co.in






**ಕೃತಿ ಕಿಶನ್ ಅಯ್ಯಂಗಾರ್**
3ನೇ ತರಗತಿ, ದೆಲ್ಲಿ ಪಬ್ಲಿಕ್ ಇಂಟರ್‌ನ್ಯಾಷನಲ್ ಸ್ಕೂಲ್





**ಅನನ್ಯ ಎನ್. ವರ್ಣ**
9ನೇ ತರಗತಿ,
ಕ್ರಿಯಾ ಅಕಾಡೆಮಿ ಫಾರ್ ಲರ್ನಿಂಗ್, ಬೆಂಗಳೂರು





**ರಿತುಪರ್ಣ ಬಿ.ಎಚ್.**
5ನೇ ತರಗತಿ, ಎಸ್.ಎಫ್.ಎಸ್. ಶಾಲೆ, ಕೊಪ್ಪಳ